# 10

# “ನಮಗಾಗಿ ಒಂದು ಮಗು ಜನಿಸಿದೆ”

### ಓದುವ ಮನೆಪಾಠ #2

I. ಯೇಸುವಿನ ಸೇವೆಯ ಹಿಂದಿನ ಕಾಲಮಾನ (ಮುಂದುವರೆಯುವದು).

I. ಯೇಸುವಿನ ಜನನದ ಕುರಿತು ಯೋಹಾನನಿಗೆ ಮುಂತಿಳಿಸಿದ್ದು (ಮತ್ತಾಯ 1:18-25).

J. ಯೇಸುವಿನ ಜನನ (ಲೂಕ 2:1-7).

K. ಯೇಸುವಿನ ಜನನದ ವಾರ್ತೆಯನ್ನು ಕುರುಬರಿಗೆ ತಿಳಿಸಿದ್ದು (ಲೂಕ 2:8-20).

L. ಯೇಸುವಿನ ಸುನ್ನತಿ, ನಾಮಕರಣ, ದೇವಾಲಯ ಸೇವೆ (ಲೂಕ 2:21-39).

M. ಮೂಡಣ ದೇಶದ ಪಂಡಿತರು ಯೇಸುವನ್ನು ಸಂಧಿಸಿದರು (ಮತ್ತಾಯ 2:1-12).

N. ಐಗುಪ್ತಕ್ಕೆ ತಪ್ಪಿಸಿಕೊಂಡದ್ದು, ಬೆತ್ಲಹೇಮಿನ ಗಂಡುಮಕ್ಕಳ ಕೊಲೆ (ಮತ್ತಾಯ 2:13-18).

O. ಶಿಶುವಾದ ಯೇಸುವನ್ನು ಐಗುಪ್ತದಿಂದ ನಜರೇತಿಗೆ ತರಲಾಯಿತು (ಮತ್ತಾಯ 2:19-23; ನೋಡಿ ಲೂಕ 2:39ಬಿ).

P. ಯೇಸುವಿನ ನಜರೇತಿನ ವಾಸ, ಹನ್ನೆರಡನೇ ವಯಸ್ಸಿನಲ್ಲಿ, ಯೆರೂಸಲೇಮನ್ನು ಸಂಧಿಸಿದನು (ಲೂಕ 2:40-52).

### ಪೀಠಿಕೆ

“ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು” (ಯೆಶಾಯ 9:6). “ನಮಗಾಗಿ ಒಂದು ಮಗು ಹುಟ್ಟಿದೆಯಷ್ಟೆ ಎಂದು ಯೆಶಾಯನು ಪ್ರವಾದಿಸಿದನು ...”

ಯುದ್ಧ ಮಾಡಿ, ಯೆಹೂದ್ಯರನ್ನು ಬಿಡುಗಡೆ ಮಾಡುವ ಒಬ್ಬನನ್ನು ದೇವರು ಕಳುಹಿಸುವನೆಂದು ಯೆಹೂದ್ಯರು ನಂಬಿದ್ದರು, ಅದಕ್ಕಾಗಿ ದೇವರು ಒಬ್ಬ ಮಗನನ್ನು ಕಳುಹಿಸುವನೆಂದು ನಂಬಿದ್ದರು. ಲೋಕದ ಸಿಂಹಾಸನದಲ್ಲಿ ಆಳುವ ಅರಸನನ್ನು ಜನರು ಬಯಸಿದ್ದರು, ಆದರೆ ದೇವರು ಅವರಿಗೆ ಹಾಲು ಕುಡಿಯುವ ಹಸುಗೂಸನ್ನು ನೀಡಿದನು. ಅದು ಮನುಷ್ಯರ ಮಾರ್ಗವಾಗಿರದೆ, ದೇವರ ಹಾದಿಯಾಗಿತ್ತು.

## ವಾಗ್ದಾನದ ಮಗನು (ಮತ್ತಾಯ 1:18-25)

“ಕ್ರಿಸ್ತನು ಬರುವನು!” ಎಂಬ ಪಾಠದಲ್ಲಿ, ಸ್ನಾನಿಕನಾದ ಯೋಹಾನನ ಪ್ರಾರಂಭದ ಸೇವೆಯ ಕುರಿತು ಅಂತ್ಯಗೊಳಿಸಿದ್ದೆವು. ಮರಿಯಳು, ಎಲಿಜಬೇತಳ ಸಂಗಡ ಮೂರು ತಿಂಗಳು ಕಳೆದು, ಹಿಂದಿರುಗಿದ ಸಂದರ್ಭದಿಂದ ನಮ್ಮ ಪಾಠವನ್ನು ಆರಂಭಿಸೋಣ. ಅವಳು ನಜರೇತಿಗೆ ನಡೆದು ಬರುವಾಗ, ಆಕೆಯು ಗರ್ಭವತಿಯಾಗಿದ್ದಳು ಎಂಬುದು ಎಲ್ಲರಿಗೂ

ತಿಳಿದ ಸಹಜ ಸಂಗತಿಯಾಗಿತ್ತು. ಆದ್ದರಿಂದ ಉಂಟಾದ ಪಿಸುಗುಟ್ಟುವಿಕೆಯನ್ನು ನಾನು ಊಹಿಸಿಕೊಳ್ಳುತ್ತೇನೆ.

**ಯೋಸೇಫನ ಸಮಸ್ಯೆ (ವಚನಗಳು 18, 19)**

ಯೋಸೇಫನು ಬಹು ಬೇಸರವುಳ್ಳವನಾಗಿರಬಹುದು, ಅವನು ತಾನು ಏನು ಮಾಡಬೇಕೆಂದು ತೋರದವನಾಗಿದ್ದನು. ನಿಶ್ಚಿತಾರ್ಥವು ನಿಯಮಾನುಸಾರವಾಗಿತ್ತು. ಅದಾಗ್ಯೂ ಅವನಿಗೆ ಇನ್ನೂ ಮದುವೆಯಾಗಿರಲಿಲ್ಲ. ಅವನಿಗೆ ಮೂರು ಆಯ್ಕೆಗಳಿದ್ದವು:

(1) ಮರಿಯಳ ಪರಿಸ್ಥಿತಿಯನ್ನು ನಿರ್ಲಕ್ಷಮಾಡದೆ, ಆಕೆಯನ್ನು ಮದುವೆ ಯಾಗಬಹುದು. ಅದರ ಸಾಧ್ಯತೆಯನ್ನು ಸಹಜವಾಗಿ ಅವನು ಪರಿಗಣಿಸಲಿಲ್ಲ. ಅವನು ನೀತಿವಂತನಾದ್ದರಿಂದ (ವಚನ 19), ಅನೀತಿಯನ್ನು ಕ್ಷಮಿಸುವದು ನ್ಯಾಯಬದ್ಧವಾಗಿರಲಿಲ್ಲ.[1]

(2) ತನ್ನೊಂದಿಗಿನ ನಿಶ್ಚಿತಾರ್ಥಕ್ಕೆ ಮರಿಯಳು ಅಪನಂಬಿಗಸ್ತಳಾಗಿದ್ದಳು ಎಂದು ತಿಳಿದು, ಧರ್ಮಶಾಸ್ತ್ರದ ಪ್ರಕಾರ ಆಕೆಯನ್ನು ಕಲ್ಲೆಸೆದು ಕೊಲ್ಲಬಹುದಿತ್ತು (ಧರ್ಮೋಪದೇಶಕಾಂಡ 22:23, 24). ಈ ಕಾರ್ಯವನ್ನು ಯೋಸೇಫನು ನಿರಾಕರಿಸಿದನು. ಅವನು ನೀತಿವಂತನೂ, ಕರುಣೆವುಳ್ಳವನೂ ಆಗಿದ್ದನು. ಮರಿಯಳ ಮೇಲಿನ ಪ್ರೀತಿ ಅವನಲ್ಲಿ ಉಳಿಯುತ್ತಿತ್ತು.

(3) ಒಂದು ವೇಳೆ ಅವಳನ್ನು ಅವನು ವಿಚ್ಛೇದನ ಮಾಡಬಹುದಿತ್ತು.[2] ಧರ್ಮಶಾಸ್ತ್ರದಪ್ರಕಾರ ಆಕೆಯಲ್ಲಿ ಅಗೌರವದ ಸ್ಥಿತಿಯನ್ನು ಗಮನಿಸಿದಾಗ, ಪುರುಷನು ತನ್ನ ಹೆಂಡತಿಗೆ ವಿಚ್ಛೇದನ ಪತ್ರವನ್ನು ನೀಡಬಹುದಿತ್ತು (ಧರ್ಮೋಪದೇಶಕಾಂಡ 24:1). ಅದು ಮೂರು ಕೆಟ್ಟತನದಲ್ಲಿ ಒಂದು ಎಂದು ಯೋಸೇಫನು ಪರಿಗಣಿಸಿದನು.[3] ಆದ್ದರಿಂದ ಮರಿಯಳನ್ನು ಗುಪ್ತವಾಗಿ ಬಿಟ್ಟು ಬಿಡಬೇಕೆಂದು ನಿರ್ಧರಿಸಿದನು. ಇದು ಅವನಿಗೆ ದುಃಖದ ಸಂಗತಿಯಾಗಿತ್ತು.[4]

**ದೇವರು ನೀಡಿದ ಪರಿಹಾರ (ವಚನಗಳು 20-25)**

ಯೆಶಾಯನು ಪ್ರವಾದಿಸಿದ ಮಗುವಿಗಾಗಿ ದೇವರ ಪರಿಹಾರವನ್ನು ಗಮನಿಸಿ. ದುಃಖದ ಸಮಯದಲ್ಲಿದ್ದ ಯೋಸೇಫನಿಗೆ ದೂತರ ಮೂಲಕ ದೇವರು ಬಿಡುಗಡೆ ಮಾಡಿದನು. ದೇವದೂತನು ಆ ಬಡಗಿಗೆ,

> … ಅವನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು - ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮದಿಂದಲೇ ಆದದ್ದು. ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿಕಾಯುವವನು ಅಂದನು (ಮತ್ತಾಯ 1:20, 21).

ಒಂದು ವೇಳೆ ಯೋಸೇಫನು ಮಿಶ್ರ ಉದ್ವೇಗಕ್ಕೆ ಒಳಗಾಗಿರಬಹುದು: ತನ್ನ ಪ್ರಿಯಳಾದ ಮರಿಯಳು, ನಂಬಿಕೆಗೆ ಅರ್ಹಳು ಎಂದು ಸಂತೋಷಪಡಬಹುದಿತ್ತು, ಮೆಸ್ಸೀಯನ ಕುರಿತು ಪ್ರಚಾರ ಮಾಡಲು ಆನಂದ ಪಟ್ಟಿರಬಹುದು, ಅಥವಾ ಜನರ ಟೀಕೆ ಹಾಗೂ ನಗಜಾಟಿಕೆಗೆ ಅವರಿಬ್ಬರೂ ತುತ್ತಾಗಿದ್ದರು ಎಂದು ಅರಿತಿರಬಹುದು. "ಅವನು ಸ್ಥಿರಮನಸ್ಸಿನಿಂದ ಎದ್ದು, ದೇವದೂತನ ಅಪ್ಪಣೆಯಂತೆ ಮರಿಯಳನ್ನು ತನ್ನ ಹೆಂಡತಿಯನ್ನಾಗಿ ಸ್ವೀಕರಿಸಿ,[5] ಯೇಸುವಿನ ಜನನದವರೆಗೆ ಆಕೆಯನ್ನು ಅರಿಯಲಿಲ್ಲ[6]" (ಮತ್ತಾಯ 24, 25ಎ).

ಯೇಸು ವಾಗ್ದಾನದ ಮೆಸ್ಸಿಯನು ಎಂದು ನಂಬಿದ್ದ ಮತ್ತಾಯನು ಪ್ರೇರಿತವಾದ ಹೇಳಿಕೆ

ಯನ್ನು ನೀಡಿರುವನು:

> ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ[7] ಇದೆಲ್ಲಾ ನಡೆಯಿತು; ಆ ಮಾತು ಏನಂದರೆ - ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್[8] ಎಂದು ಹೆಸರಿಡುವರು ಎಂಬುದು. ದೇವರು ನಮಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ[9] (ವಚನಗಳು 22, 23).

J. W. ಮೆಕ್‌ಗಾರ್ವೆಯವರ, ''ಇಮ್ಮಾನುವೇಲ್'' ಎಂಬುದರ ಅರ್ಥವು ಗಮನಾರ್ಹವಾಗಿದೆ. ದೇವರು ನಮಗಿಂತಲೂ ದೊಡ್ಡವನು ಎಂದು ನಿಸರ್ಗವು ತಿಳಿಸುತ್ತದೆ; ದೇವರು ನಮ್ಮ ವಿರೋಧಿ ಎಂದು ನಿಯಮವು ತಿಳಿಸುತ್ತದೆ; ಆದರೆ ಸುವಾರ್ತೆಯು, "ದೇವರು ನಮಗಾಗಿ ಸಮೀಪವಾಗಿರುವನು" ಎಂದು ತಿಳಿಸುತ್ತದೆ.[10]

## ಮಗುವು ಪ್ರಕಟವಾಯಿತು (ಲೂಕ 2:1-20)

### ಯೇಸುವಿನ ಜನನ (ವಚನಗಳು 1-7)

ಯೋಸೇಫ ಮತ್ತು ಮರಿಯಳು ಅಗಾಧವಾದ ಪ್ರೀತಿಯನ್ನು ಹೊಂದಿದ್ದರಿಂದ ಅವರ ಮುಂದಿದ್ದ ಅವಮಾನ ಹಾಗೂ ಅಡೆತಡೆಗಳನ್ನು ಧೈರ್ಯವಾಗಿ ಎದುರಿಸಿದರು. ಮರಿಯಳು ಒಂಬತ್ತು ತಿಂಗಳು ಗರ್ಭವಸ್ಥೆಯಲ್ಲಿರುವಾಗ, ಅವರ ಭರವಸೆಯು ಪ್ರತಿದಿನ ವೃದ್ಧಿಗೊಂಡಿತು. ಅದಾಗ್ಯೂ ಅಲ್ಲಿ ಒಂದು ಸಮಸ್ಯೆ ಉದ್ಭವಿಸಿತು, ಅದು ಅವರ ಅರಿವಿಗೆ ಬಂದಿರಲಿಲ್ಲ. ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಜನಿಸುವವನಿದ್ದನು, ಆದರೆ ಅವರು ನಜರೇತಿನಲ್ಲೇ ನೆಲೆಸಿದ್ದರು (ಮೀಕ 5:2).

ಈ ಹಿಂದೆ ತನ್ನ ಉದ್ದೇಶವನ್ನು ಪ್ರಕಟಿಸಲು ದೇವರು ತನ್ನ ದೂತರನ್ನು ಉಪಯೋಗಿಸಿದ್ದನು. ಈಗಿನ ಪರಿಸ್ಥಿತಿಯಲ್ಲಿ ದೇವರು ರೋಮಾಯದ ಚಕ್ರವರ್ತಿಯನ್ನು ಉಪಯೋಗಿಸಿದನು "ಆ ಕಾಲದಲ್ಲಿ ರಾಜ್ಯವೆಲ್ಲಾ ಖಾನೇಷುಮಾರಿ[11] ಬರಸಿ ಕೊಳ್ಳಬೇಕೆಂದು ಆಜ್ಞೆಯು ಚಕ್ರವರ್ತಿಯಾದ ಔಗುಸ್ತನಿಂದ ಹೊರಟಿತು" (ಲೂಕ 2:1).[12] ರೋಮಾಯ ಸಾಮ್ರಾಜ್ಯದಲ್ಲಿ ಹೆಚ್ಚು ಸುಂಕ ವಸೂಲಿ ಮಾಡುವ ಸಲುವಾಗಿ ಈ ಖಾನೇಷು ಮಾರಿ ಮಾಡಿದನು.

ರೋಮಾಯದಲ್ಲಿದ್ದವರು, ತಮ್ಮ ಪೂರ್ವಿಕರು ವಾಸಿಸಿದ್ದ ಸ್ಥಳಕ್ಕೆ ಹಿಂದಿರುಗಬೇಕಿತ್ತು. ದಾವೀದನ ವಂಶದವನಾದ ಯೋಸೇಪನು ಸಹ ಯೆರೂಸಲೇಮಿನಿಂದ ಐದು ಮೈಲಿ ದೂರದಲ್ಲಿದ್ದ ಬೆತ್ಲೆಹೇಮ್ ಎಂಬ ಹಳ್ಳಿಗೆ ಹಿಂದಿರುಗಬೇಕಿತ್ತು.[13] ನಿಯಮದ ಪ್ರಕಾರ ಮರಿಯಳು ಹೋಗುವ ಅಗತ್ಯವಿರಲಿಲ್ಲ, ಆದರೆ ಮಗುವಿನ ಜನನದ ಸಮಯದಲ್ಲಿ ಆಕೆ ಯೋಸೇಫನಿಂದ ದೂರವಿರಲು ಬಯಸಲಿಲ್ಲ.[14]

> ಯೋಸೇಫನು ಸಹ ತಾನು ದಾವೀದನ ಮನೆತನದವನೂ ಗೋತ್ರದವನೂ ಆಗಿದ್ದದರಿಂದ ಹೆಸರುಬರಸಿಕೊಳ್ಳುವದಕ್ಕಾಗಿ ತನಗೆ ನಿಶ್ಚಿತಾರ್ಥವಾಗಿದ್ದ ಮರಿಯಳ ಸಂಗಡ ಗಲಿಲಾಯಸೀಮೆಯ ನಜರೇತ್ ಎಂಬ ಊರಿನಿಂದ ಹೊರಟು ಯುದಾಯದಲ್ಲಿರುವ ಬೇತ್ಲೆಹೇಮೆಂಬ ದಾವೀದನೂರಿಗೆ ಹೋದನು.[15] ಆಗ ಮರಿಯಳು ಪೂರ್ಣಗರ್ಭಿಣಿಯಾಗಿದ್ದಳು (ವಚನಗಳು 4, 5).

ನಜರೇತಿನಿಂದ, ಬೆತ್ಲೇಹೇಮಿನ ಪ್ರಯಾಣವು ಕಠಿಣವಾಗಿತ್ತು. "ಅವರಿಗೆ ಅಲ್ಲಿ ಸ್ಥಳವು ಸಹ ಇರಲಿಲ್ಲ" (ವಚನ 7). ದನಗಳ ಕೊಟ್ಟಿಗೆಯಲ್ಲಿ ಅವರು ಹೇಗೆ ವಿಶ್ರಾಂತಿ ಪಡೆದರು ಎಂದು ತಿಳಿದಿರುವದಿಲ್ಲ,[16] ಆದರೆ ಆತನು ಅಲ್ಲಿ ಜನಿಸಿದನು. ಆತನ ಚರಿತ್ರೆಯನ್ನು[17] ಸಂಕ್ಷಿಪ್ತ

ವಾದ ಪದಗಳಲ್ಲಿ ತಿಳಿಸಲಾಗಿದೆ.

> ಅವರು ಅಲ್ಲಿದ್ದಾಗ ಆಕೆಗೆ ದಿನತುಂಬಿತು. ಆಕೆಯು ತನ್ನ ಚೊಚ್ಚಲಮಗನನ್ನು[18] ಹೆತ್ತು ಬಟ್ಟೆಯಲ್ಲಿ ಸುತ್ತಿ ಚತ್ರದಲ್ಲಿದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು (ವಚನಗಳು 6, 7).

### ಕುರುಬರ ಚರಿತ್ರೆ (ವಚನಗಳು 8-20)

ಜನ ತುಂಬಿದ ರಗಳೆ ಪಟ್ಟಣದಲ್ಲಿ ಹೊಸ ಶಿಶುವಿನ ಗೋಳಾಟ ಯಾರು ಗುರುತಿಸಿರಲಿಲ್ಲ, ಆದರೆ ದೇವರು ವಿಷಯಗಳನ್ನು ಬಹಿರಂಗ ಮಾಡದೆ ಇರಲಿಲ್ಲ. ದೈವೀಕವಾದ ಪ್ರಕಟನೆಯೂ ಪಟ್ಟಣದ ನಾಯಕರಿಗೆ ಅಥವಾ ಸಮಾಜ ಮಂದಿರದ ಅಧಿಕಾರಿಗಳಿಗೆ ಪ್ರಕಟಿಸಲಿಲ್ಲ. "ಹೊಲದಲ್ಲಿದ್ದುಕೊಂಡು ರಾತ್ರಿಯಲ್ಲಿ ತಮ್ಮ ಕುರಿ ಹಿಂಡನ್ನು ಕಾಯುತ್ತೀರಿ" (ವಚನ 8) ಎಂದು ಒಂದು ಕುರುಬರ ಗುಂಪಿಗೆ ಪ್ರಕಟಿಸಲ್ಪಟ್ಟಿದೆ.

ಕುರುಬರಿಗೆ ದೇವ ದೂತರು ಕಾಣಿಸಿಕೊಂಡ ಕಥೆಯು ಪ್ರಪಂಚದಲ್ಲೆ ಪ್ರಖ್ಯಾತಿ ಹೊಂದಿದ್ದಾಗಿದೆ. ದೇವದೂತರ ಮಾತುಗಳು ಮತ್ತೆ ಮತ್ತೆ ಹೇಳಲ್ಪಟ್ಟಿದೆ:

> ಆ ದೂತನು ಅವರಿಗೆ-ಹೆದರಬೇಡಿರಿ, ಕೇಳಿರಿ; ಜಮರಿಗೆಲ್ಲಾ ಮಹಾ ಸಂತೋಷ ವನ್ನುಂಟುಮಾಡುವ ಶುಭಸಮಾರಂಭವನ್ನು ನಿಮಗೆ ತಿಳುಸುತ್ತೇನೆ. ಅದೇನಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ. ಆತನು ನಿಮಗೆ ಗೊತ್ತಾಗುವದಕ್ಕೆ ಗುರುತೇನಂದರೆ - ಬಟ್ಟೆಯಿಂದ ಸುತ್ತಿರುವ ಒಂದು ಕೂಸು ಗೊದಲಿಯಲ್ಲಿ ಮಲಗಿರುವದನ್ನು ಕಾಣುವಿರಿ ಎಂದು ಹೇಳಿದನು (ವಚನಗಳು 10-12).[19]

ಅಲ್ಲಿ ಆಹಾರದ ಎಷ್ಟು ತೊಟ್ಟಿಗಳನ್ನು ಕುರುಬರು ಕಂಡರು. ಅದರಲ್ಲಿ ಯಾವ ತೊಟ್ಟಿಯಲ್ಲಿ ಅವರು ಮಗುವನ್ನು ಕಂಡರು? ಅವರು ಆ ಊರಿನಲ್ಲಿದ್ದ ಸಕಲ ಕೊಟ್ಟಿಗೆಗಳನ್ನು ಹುಡುಕಿ, ಮಗುವಿದ್ದ ಗೋದಲಿಯ ಬಗ್ಗೆ ಊರಿನಲ್ಲೆಲ್ಲಾ ಸಾರಿರಬಹುದು (ವಚನಗಳು 17, 18). ಅವರು ಶುಭ ಸಂದೇಶವನ್ನು ಸಾರಿದ ಮೊದಲ ಸಾರ್ವಾತಿಕರಾಗಿದ್ದರು.[20]

## ಸ್ತುತಿಗೆ ಪಾತ್ರವಾದ ಮಗು (ಲೂಕ 2:21-39)

### ಸುನ್ನತಿ ಹಾಗೂ ನಾಮಕರಣ (ವಚನ 21)

ಯೇಸುವಿನ ಜನನವು ಹಳೇ ಒಡಂಬಡಿಕೆಗೆ ಅಂತ್ಯವಾದಿತು ಎಂದು ಕೆಲವರ ಅಭಿಪ್ರಾಯವಿರಬಹುದು, ಆದರೆ "ಕ್ರಿಸ್ತನು ಧರ್ಮಪ್ರಮಾಣದ ಪ್ರಕಾರವೇ ಜನಿಸಿದನು" ಎಂದು ಸತ್ಯವೇದ ತಿಳಿಸುತ್ತದೆ (ಗಲಾತ್ಯ 4:4).[21] ಆತನು ಯೆಹೂದ್ಯ ತಾಯಿಯಲ್ಲಿ ಜನಿಸಿ ಯೆಹೂದ್ಯನು ಹಾಗೂ ಯೆಹೂದ್ಯ ಸಂಪ್ರದಾಯವನೂ ಆಗಿರುವನು. ಕ್ರಿಸ್ತನು ಎಂಟು ದಿನದವನಾದಾಗ, ನಿಯಮದ ಪ್ರಕಾರ ಸುನ್ನತಿ ಮಾಡಿಸಿಕೊಂಡನು (ಯಾಜಕಕಾಂಡ 12:3). ಆ ಸಮಯದಲ್ಲಿ ಆತನಿಗೆ "ಯೇಸು" ಎಂದು ನಾಮಕರಣ ಮಾಡಲಾಯಿತು. ಅದು ದೇವದೂತರ ಸಲಹೆಯಾಗಿತ್ತು (ಲೂಕ 1:31; ಮತ್ತಾಯ 1:21).

### ದೇವಾಲಯದ ಪ್ರವಾಸ (ವಚನಗಳು 22-38)

ಯೋಸೇಫ ಮತ್ತು ಮರಿಯಳಿಗೆ ನಿಯಮವು ಕೆಲವು ಜವಾಬ್ದಾರಿಗಳನ್ನು ನೀಡಿತ್ತು: ಹತ್ತನೇ ಪಿಡುಗು ಉಂಟಾದಾಗ, ಇಸ್ರಾಯೇಲ್ಯರು ತಮ್ಮ ಚೊಚ್ಚಲ ಗಂಡನ್ನು ವಿಮೋಚನೆ ಮಾಡಿದ ಹಾಗೆ, ಕೂಸಾದ ಯೇಸುವನ್ನು ಹಣವನ್ನು ನೀಡಿ ವಿಮೋಚನೆ ಮಾಡ

ಬೇಕಿತ್ತು (ವಿಮೋಚನಕಾಂಡ 13:2, 10-14; 34:19, 20; ಅರಣ್ಯಕಾಂಡ 3:40-51; 18:15, 16). ಮಗನು ಜನಿಸಿ ನಾಲ್ವತ್ತು ದಿವಸಗಳ ನಂತರ ತಾಯಿಯು ಸಹ ತನ್ನನ್ನು ಶುದ್ಧ ಪಡಿಸಿಕೊಳ್ಳುವುದಕ್ಕೋಸ್ಕರ ದೇವಾಲಯಕ್ಕೆ ಹೋಗಬೇಕಿತ್ತು. ಮತ್ತು ಯಜ್ಞವನ್ನು ಸಮರ್ಪಿಸಬೇಕಿತ್ತು (ಯಾಜಕಕಾಂಡ 12:2-8).[22] ಯೇಸುವಿನ ಸಮರ್ಪಣೆ ಹಾಗೂ ಮರಿಯಳ ಶುದ್ಧತೆಯನ್ನು ದೇವಾಲಯದಲ್ಲಿ ಏಕ ಕಾಲಕ್ಕೆ ಮಾಡಬೇಕಿತ್ತು.

ಆ ದೇವಾಲಯದಲ್ಲಿದ್ದ ಅನೇಕರಿಗೆ, ಯೋಸೇಫನ ಚಿಕ್ಕ ಕುಟುಂಬದ ಅರಿವಾಗಲಿಲ್ಲ, ಆದರೆ ಅಲ್ಲಿದ್ದ ಇಬ್ಬರು ಮಾತ್ರ ಅವರ ಗುರುತು ಹಿಡಿದರು. ಅವರಲ್ಲಿ ಸಿಮೆಯೋನನು ಒಬ್ಬನು, ಇವನು ಮೆಸ್ಸೀಯನನ್ನು ನೋಡದ ಹೊರತು ಮರಣಿಸುವದಿಲ್ಲ ಎಂಬ ವಾಗ್ದಾನವನ್ನು ಹೊಂದಿದ್ದನು. ಇವನು ದೈವ ಭಕ್ತಿಯ ವ್ಯಕ್ತಿಯಾಗಿದ್ದನು. ಯೇಸುವನ್ನು ನೋಡಿದ ತಕ್ಷಣ ಅವನ ಬಾಯಿಂದ ಹೊರಟ ಅದ್ಭುತವಾದ ಮಾತುಗಳಿಂದ ಯೇಸು ಯೆಹೂದ್ಯರಿಗೂ ಹಾಗೂ ಅನ್ಯರಿಗೂ ರಕ್ಷಣೆಯನ್ನು ನೀಡುವನು ಎಂಬ ತಾತ್ಪರ್ಯವಿತ್ತು (ಲೂಕ 2:31, 32). ಹಾಗೂ ಮರಿಯಳ ಹೃದಯಕ್ಕೆ ನಾಟಬಹುದಾದ ಕತ್ತಿಯ ಸಂಗತಿಗಳು ಸಹ ಅವನ ಮಾತಿನಲ್ಲಿ ಅಡಗಿದ್ದವು (ವಚನ 35).

ಎಂಬತ್ತೈದು ಪ್ರಾಯದ ವಿಧವೆಯಾದ ಹನ್ನಳು ಎರಡನೆಯ ವ್ಯಕ್ತಿಯಾಗಿದ್ದಳು.[23] ಆಕೆ ಯೇಸುವನ್ನು ಕಂಡ ತಕ್ಷಣ, "ಆಕೆ ಅದೇ ಗಳಿಗೆಯಲ್ಲಿ ಹತ್ತಿರಕ್ಕೆ ಬಂದು ದೇವರಿಂದಾದ ಉಪಕಾರವನ್ನು ನೆನಸಿಕೊಂಡಾಡಿದ್ದದೆ ಯೆರೂಸಲೇಮಿನ ಬಿಡುಗಡೆಯನ್ನು ಹಾರೈಸುತ್ತಿದ್ದವರೆಲ್ಲರ ಸಂಗಡ ಆತನ ವಿಷಯವಾಗಿ ಮತಾಡುವವಳಾದಳು" (ವಚನ 38).

### ಬೆತ್ಲೆಹೇಮಿಗೆ ಹಿಂದಿರುಗಿದರು (ವಚನ 39ಎ)

"ಇತ್ತಲಾಗಿ ಅವರು ಕರ್ತನ ಧರ್ಮಶಾಸ್ತ್ರದಲ್ಲಿ ಹೇಳಿರುವ ಕಾರ್ಯಗಳನ್ನೆಲ್ಲಾ ನೆರವೇರಿದ ಮೇಲೆ" (ವಚನ 39ಎ). ಬೆತ್ಲಹೇಮಿಗೆ ಹಿಂದಿರುಗಿದರು (ನೋಡಿ ಮತ್ತಾಯ 2:8, 9).[24] ದಾವೀದ ಕುಮಾರನನ್ನು (ಮತ್ತಾಯ 1:1; ಲೂಕ 1:32) ದಾವಿದ ನಗರದಲ್ಲಿ (ಲೂಕ 2:4, 11)ಬೆಳೆಸುವದು ಸೂಕ್ತ ಎಂದು ಅವರು ನಿರ್ದರಿಸಿದರು. ಯೋಸೇಫನು ಅಲ್ಲಿ ಒಂದು ಮನೆಯಲ್ಲಿ (ಮತ್ತಾಯ 2:11) ಮರಗೆಲಸ ಮಾಡುತ್ತಾ ವಾಸಿಸಿದ್ದನು.

## ಮಗುವಿನ ಸಂರಕ್ಷಣೆ (ಮತ್ತಾಯ 2:1-23 ಲೂಕ 2:39ಬಿ)

### "ಜೋಯಿಸರ ಭೇಟಿ" (ಮತ್ತಾಯ 2:1-12)[25]

ಯೇಸು ಯೆಹೂದ್ಯರಿಗೆ ಮಾತ್ರವಲ್ಲದೆ, ಅನ್ಯರಿಗೂ ಸಹ ಮೆಸ್ಸೀಯನೆಂದು ಸಿಮೆಯೋನನು ಪ್ರಕಟಿಸಿದ್ದನು. ಅದು ಬೇಗನೆ ರುಜುವಾತಾಯಿತು: "ಯೇಸು ಹುಟ್ಟಿದಾಗ ಮೂಡಣ[26] ... ದೇಶದ ಜೋಯಿಸಲು ಬೆತ್ಲೆಹೇಮಿಗೆ ಬಂದರು" (ವಚನ 1). ಗ್ರೀಕ್‌ನ "ಮಂತ್ರವಾದಿಗಳು"[27] ಎಂಬ ಪದದಿಂದ "ಜೋಯಿಸರು" ಎಂಬ ಪದ ಉದ್ಭವವಾಗಿದೆ. ಅವು ಜ್ಞಾನವನ್ನು ಹುಡುಕುವವರು. ಅವು ಜ್ಞಾನವು ಮೂಡನಂಬಿಕೆಯಿಂದ ಕೂಡಿದ್ದಿತು.[28] ಅವರು ಅರಸರಾಗಿರಲಿಲ್ಲ,[29] ಆದರೆ ಅರಸರಿಗೆ ಸೇವೆ ಮಾಡುವವರಾಗಿದ್ದರು.[30] ಹೇಗೂ ದೇವರು ಅವರಿಗೆ ಬಂದು ನಿರ್ದಿಷ್ಟವಾದ ನಕ್ಷತ್ರವನ್ನು ಅವರು ಹಿಂಬಾಲಿಸುವದಾದರೆ, ಮೆಸ್ಸೀಯನು ದೊರಕುವನು ಎಂಬ ಸೂಚನೆಯನ್ನು ನೀಡಿದ್ದನು.

ಮೊದಲಿಗೆ ನಕ್ಷತ್ರವು ಅವರನ್ನು ಯೆರೂಸಲೇಮಿಗೆ ನಡೆಸಿತು. ಅರಸನು ಹುಟ್ಟಿದ ಸಂಗತಿಯು ನಗರದಲ್ಲೆಲ್ಲಾ ಕಂಗೋಳಿಸಿತು ಎಂದು ಅವರು ನಂಬಿದ್ದರು. ಆದರೆ ಅಲ್ಲಿ ದೈನಂದಿನದ ವ್ಯವಹಾರದ ಮಾತುಗಳು ಮಾತ್ರ ಕೇಳಿಸಿದವು.

ಆದ್ದರಿಂದ ಅವರು "ಯೆಹೂದ್ಯರ ಅರಸನಾಗಿ[31] ಹಟ್ಟಿದವನು ಎಲ್ಲಿದ್ದಾನೆ?" ಎಂದರು

(ವಚನ 2ಎ). ಈ ಮಾತುಗಳು ಹೆರೋದ ಮಹಾರಾಜನಿಗೆ ತಲುಪಿದವು. ಆಗ ಹೆರೋದನು ಯೆಹೂದ್ಯರ ಅರಸನು ಎಲ್ಲಿ ಹುಟ್ಟುವನು ಎಂದು ಯೆಹೂದ್ಯ ಧರ್ಮದ ನಾಯಕರನ್ನು ವಿಚಾರಿಸಿದನು. ಅವರು ಹಿಂಜರಿಯದೆ "ಬೆತ್ಲೆಹೇಮಿನಲ್ಲಿ" ಅಂದರು (ವಚನಗಳು 5, 6). ಹೆರೋದನು ಈ ವಿಚಾರವನ್ನು ಜೋಯಿಸರಿಗೆ ತಿಳಿಸಿ, ಅವರು ಮಗುವನ್ನು ನೋಡಿದಾಗ, ಆತನ ಕುರಿತು ಅವನಿಗೆ ತಿಳಿಸಬೇಕೆಂದನು. "ಆಗ ನಾನು ಸಹ ಬಂದು ಅದಕ್ಕೆ ಅಡ್ಡ ಬೀಳಬೇಕು" ಅಂದನು (ವಚನ 8).

ಜೋಯಿಸರು ಯೆರೂಸಲೇಮಿನ ದಕ್ಷಿಣಕ್ಕೆ ಪ್ರಯಾಣ ಮಾಡುವಾಗ, ಅವರನ್ನು ಮುನ್ನೆಡಿಸಿದ ನಕ್ಷತ್ರವು ಅವರಿಗೆ ಪುನ ಪ್ರತ್ಯಕ್ಷವಾಗಿ, "ಅವರ ಮುಂದೆ ಮುಂದೆ ನಡೆದು ಕೂಸು ಇದ್ದ ಸ್ಥಳದಲ್ಲಿ ಬಂದು ನಿಂತಿತು" (ವಚನ 9ಬಿ). ಆಗ ಅವರು ಸಂತೋಷದಿಂದ ಮನೆಯೊಳಕ್ಕೆ ಹೋಗಿ ಆ ಕೂಸನ್ನು ಅದರ ತಾಯಿಯಾದ ಮರಿಯಳ ಬಳಿಯಲ್ಲಿ ಕಂಡು ಅದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಗಂಟುಗಳನ್ನು ಬಿಚ್ಚಿ ಅದಕ್ಕೆ ಚಿನ್ನ, ಧೂಪ ರಕ್ತ ಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು (ವಚನಗಳು 10, 11). ನಮಗೆಲ್ಲರಿಗೂ ಚಿನ್ನದ ಪರಿಚಯವಿದೆ. ಒಂದು ವಿಧವಾದ ಮರದ ಅಂಟಿನಿಂದ ದೂಪವನ್ನು ಮಾಡುತ್ತಿದ್ದರು. ಮೃತ ದೇಹಗಳನ್ನು ಸಂಸ್ಕರಣೆ ಮಾಡಲು ರಕ್ತಬೋಳವನ್ನು ಉಪಯೋಗಿಸುತ್ತಿದ್ದರು, ಅದು ಸುಗಂಧ ವಾಸನೆಯನ್ನು ಹೊಂದಿತು.

ತಮ್ಮ ಉದ್ದೇಶ ಈಡೇರಿದ ನಂತರ ಜೋಯಿಸರು ಹಿಂದಿರುಗಿದರು. ಆ ಮೇಲೆ ದೇವರು ಕನಸಿನಲ್ಲಿ ಅವರಿಗೆ ನೀವು ಹೆರೋದನ ಬಳಿಗೆ ತಿರಿಗೆ ಹೋಗಬಾರದೆಂದು ಅಪ್ಪಣೆ ಕೊಟ್ಟದ್ದರಿಂದ ಅವರು ಮತ್ತೊಂದು ದಾರಿಯಿಂದ ತಮ್ಮ ದೇಶಕ್ಕೆ ಹೋದರು (ವಚನ 12).

**ಐಗುಪ್ತಕ್ಕೆ ತಪ್ಪಿಸಿಕೊಂಡು ಹೋದದ್ದು (ಮತ್ತಾಯ 2:13-15)**

ಹೆರೋದನ ಕೆಟ್ಟ ಪ್ರತಿಕ್ರಿಯೆಯ ಸಂಭವ ಇದ್ದದರಿಂದ, ದೇವ ದೂತರ ಮುಖಾಂತರ ಅವರು ಐಗುಪ್ತಕ್ಕೆ ಹೋಗಬೇಕೆಂದು ದೇವರು ಅವರು ಎಚ್ಚರಿಸಿದನು.[32] ಈಗಲೂ ಸಹ ಯೋಸೇಫನು ಹಿಂಜರಿಯಲಿಲ್ಲ. ಅವರು ನೂರು ಮೈಲಿಯಷ್ಟು ಪ್ರಯಾಣ ಮಾಡಿ ಐಗುಪ್ತವನ್ನೂ ಸಿನಾಯಿ ಪಾರಂತದಲ್ಲಿ ಮತ್ತೊಂದು ನೂರು ಮೈಲಿಗಳ ಪ್ರಯಾಣ ಮಾಡಿ ನೈಲ್ ನದಿಯ ಬಳಿ ಹೋಗಬೇಕಿತ್ತು.[33] ಅಲ್ಲಿ ಅವರ ಸಂಬಂಧಿಗಳಾದ ಅನೇಕ ಯೆಹೂದ್ಯರು ಚದರಿದ್ದರು.

ಯೋಸೇಫ ಮರಿಯಳು ಹಾಗೂ ಯೇಸು ಎಷ್ಟು ಕಾಲ ಐಗುಪ್ತದಲ್ಲಿ ತಂಗಿದ್ದರು ಎಂಬುದು ನಿಖರವಾಗಿಲ್ಲ. ಒಂದು ವೇಳೆ ಅನೇಕ ತಿಂಗಳುಗಳು ಇರಬಹುದು. ಅಲ್ಲಿ ಅವರು ಯಾವ ಕೆಲಸವನ್ನು ಮಾಡಿ ಬದುಕಿರಬಹುದು? ಬಹುಶಃ ಮರಗೆಲಸ ಮಾಡಿ ಬದುಕಿರಬಹುದು. ಹಾಗೂ ಚಿನ್ನ ದೂಪ ರಕ್ತ ಬೋಳದ ಬಹುಮಾನಗಳನ್ನು ಮರೆಯಬೇಡಿರಿ. ಈ ಸಮಯದಲ್ಲಿ ಪರದೇಶದವರ ಮೂಲಕ ದೇವರು ಸಹಾಯಿಸಿದ್ದನು.

**ಮುಗ್ಧ ಮಕ್ಕಳ ಕೊಲೆ (ಮತ್ತಾಯ 2:16-18)**

ಜೋಯಿಸರ ಕೂಸಿನ ಮಾಹಿತಿಯನ್ನು ನೀಡದೆ ಇದ್ದದರಿಂದ, ಹೆರೋದನು ಬಹು ಕೋಪಗೊಂಡನು. ತನ್ನ ಸಿಂಹಾಸನವನ್ನು ಉಳಿಸಿಕೊಳ್ಳುವ ಸಲುವಾಗಿ ಬೆತ್ಲೆಹೇಮಿನ ಸಕಲ ಕೂಸುಗಳನ್ನು ಕೊಂದು ಹಾಕಿದನು. ಬೆತ್ಲೆಹೇಮಿನಲ್ಲಿಯೂ ಅದರ ನೆರೆಹೊರೆ ಹಳ್ಳಿಗಳಲ್ಲಿಯೂ ಎರಡು ವರುಷದೊಳಗಿನ ಗಂಡು ಕೂಸುಗಳನ್ನೆಲ್ಲಾ ಕೊಲ್ಲಿಸಿದನು (ವಚನ 16).[34] "ಅವನು ಗೂಡನ್ನು ಕೆಡವಿದಾಗ್ಯೂ, ಅಲ್ಲಿದ ಪಕ್ಷಿ ಹಾರಿ ಹೋಗಿತ್ತು."[35]

ಬೆತ್ಲೆಹೇಮ್ ಚಿಕ್ಕ ಹಳ್ಳಿಯಾದ್ದರಿಂದ, ಕೊಲ್ಲಲ್ಪಟ್ಟ ಸಂಖ್ಯೆ ಕಡಿಮೆಯಿತ್ತು (ಅಂದಾಜು ಹನ್ನೆರಡರಿಂದ ಐವತ್ತು). ಹೆರೋದನ ಹೃದಯ ಹೀನತೆಯು, ನೂರಾರು ಜನರ

ಹೃದಯಗಳನ್ನು ಮುರಿದು ಹಾಕಿತ್ತು. ಯೆರೂಸಲೇಮಿನ ಗೋಳಾಟಕ್ಕೆ ಇದನ್ನು ಮತ್ತಾಯನು ಹೋಲಿಸಿರುವನು (ವಚನಗಳು 17, 18[36]).

ಯೇಸುವನ್ನು ಸಂರಕ್ಷಿಸಿದಂತೆ, "ಇತರೆ ಮಕ್ಕಳನ್ನು ದೇವರು ಏಕೆ ಕಾಪಾಡಲಿಲ್ಲ?" ಎಂದು ಪ್ರಶ್ನಿಸಿಬಹುದು. ದೇವರು ಮನುಷ್ಯರಿಗೆ ನೈತಿಕೆ ಜ್ಞಾನವನ್ನು ನೀಡಿರುವನು. ಹೆರೋದನು ಹೆರೋದನಾಗಿ ಇರಬೇಕೆಂದು ದೇವರು ಬಯಸಿದನು. ದೇವರ ಉದ್ದೇಶಕ್ಕೆ ಅಡ್ಡಿ ಬರುವ ಸೋಲುಗಳನ್ನು ದೇವರು ಎದುರಿಸುವನು.[37] ದೇವರು ಈ ಲೋಕಕ್ಕೆ ನಿರ್ಧಾರ ಮಾಡಿದ್ದ ರಕ್ಷಣಾ ಕಾರ್ಯಕ್ಕೆ ಈ ಸಂಗತಿಯು ಅಡ್ಡಿಯಾಗಲಿಲ್ಲ,[38] ಅದು ದುಃಖದ ಸಂಗತಿಯಾದರೂ, ಇಮ್ಮಾನುವೇಲನ ಬಿಡುಗಡೆಗಾಗಿ ಹೆಚ್ಚಳಪಡೋಣ!

### ನಜರೇತಿಗೆ ಹಿಂದಿರುಗಿದ್ದು (ಮತ್ತಾಯ 2:19-23 ಲೂಕ 2:39ಬಿ)

ಹೆರೋದನು ತೀರಿ ಹೋದ ನಂತರ, ದೂತನು ಯೋಸೇಫನಿಗೆ "ನೀನು ಎದ್ದು ಕೂಸನ್ನು ಅದರ ತಾಯಿಯನ್ನು ಕರಕೊಂಡು ಇಸ್ರಾಯೇಲ್ ದೇಶಕ್ಕೆ ಹೋಗು ಕೂಸಿನ ಪ್ರಾಣವನ್ನು ತೆಗೆಯಬೇಕೆಂದಿದ್ದವರು ಸತ್ತು ಹೋದರು" ಅಂದನು (ಮತ್ತಾಯ 2:20). ಆದರೆ ಅರ್ಖೆಲಾಯನು ತನ್ನ ತಂದೆಯಾದ ಹೆರೋದನಿಗೆ ಬದಲಾಗಿ ಯುದಾಯವನ್ನು ಆಳುತ್ತಾನೆ ಎಂದು ಯೋಸೇಫನು ಅಂಜಿದನು (ಮತ್ತಾಯ 2:22). ಅರ್ಖೆಲಾಯನು ಅವನ ತಂದೆಯಂತೆ ಕ್ರೂರಿಯಾಗಿದ್ದನು.[39]

ಆದ್ದರಿಂದ ಅವರು ಯುದಾಯವನ್ನು ಹೊರತು ಪಡಿಸಿ (ವಚನ 22), ಗಲಿಲಾಯದ ಉತ್ತರದ ನಜರೇತಿಗೆ ಪ್ರಯಾಣಿಸಿದರು. ಒಂದು ವರ್ಷದ ನಂತರ ಅವರು ಬೆತ್ಲೆಹೇಮಿಗೆ ಬಂದರು (ಮತ್ತಾಯ 2:23; ಲೂಕ 2:39ಬಿ). ನಜರೇತಿಗೆ ಹಿಂದಿರುಗುವದು ಸಹ ದೇವರ ಯೋಜನೆಯೇ ಆಗಿತ್ತು (ಮತ್ತಾಯ 2:23[40]).

## ಮಗುವನ್ನು ಸಿದ್ಧಗೊಳಿಸಿದ್ದು (ಲೂಕ 2:40-52)

ಈ ಒಂದು ಹಂತದಲ್ಲಿಯೇ, ಮತ್ತಾಯನು ಯೇಸುವಿನ ಜೀವನ ಚರಿತ್ರೆಯನ್ನು ದಾಖಲು ಮಾಡಲು ಪ್ರಯತ್ನಿಸಿರುವದಿಲ್ಲ. ಲೂಕನು ಮಾತ್ರ ಕ್ರಿಸ್ತ ಇಪ್ಪತ್ತೆಂಟು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳ ಘಟನಾವಳಿಗಳನ್ನು ಒಂದೇ ಅಂಶದಲ್ಲಿ ವಿವರಿಸಿರುವನು.[41]

### ಯೇಸುವಿನ ಹನ್ನೆರಡು ವರ್ಷದವನಾಗಿರುವಾಗ (ವಚನ 40)

ಯೇಸು ಪೂರ್ಣವಾಗಿ ದೇವರೂ ಹಾಗೂ ಮನುಷ್ಯನೂ ಆಗಿದ್ದನು. ಇತರೆ ಹುಡುಗರಂತೆಯೇ ಆತನು ಸಹ ವೃದ್ಧಿಗೊಂಡನು: "ಆ ಬಾಲಕನು ಬೆಳೆದು ಬಲಗೊಂಡು ಜ್ಞಾನದಿಂದ ತುಂಬಿದವನಾದನು; ಮತ್ತು ಆತನ ಮೇಲೆ ದೇವರ ದಯವಿತ್ತು" (ವಚನ 40; ಹೋಲಿಸಿ ಲೂಕ 1:80 ಮತ್ತು 1 ಸಮುವೇಲ 2:26).

ಬಾಲವಸ್ಥೆಯಿಂದ, ಪ್ರೌಢಾವಸ್ಥೆಗೆ ಆಗುವ ಅನುಭವಗಳನ್ನೇ, ಯೇಸು ಸಹ ಅನುಭವಿಸಬೇಕೆಂಬದು ದೇವರ ಚಿತ್ತವಾಗಿತ್ತು (ಇಬ್ರಿಯ 4:15). ಯೇಸು ತನ್ನನ್ನು ತಾನು ಬರಿದು ಮಾಡಿಕೊಳ್ಳುವದು ಮಾತ್ರವಲ್ಲದೆ (ಫಿಲಿಪ್ಪಿ 2:6, 7), ಆದರೆ ತನ್ನ ದೈವ ಜ್ಞಾನಕ್ಕೂ ಮಿತಿ ಇರಿಸಿಕೊಂಡನು (ನೋಡಿರಿ ಮಾರ್ಕ 13:32).

ಯೇಸುವಿನ ಮೊದಲ ಮಾತು, ಮೊದಲ ಹೆಜ್ಜೆಯನ್ನು, ಆತನ ನಜರೇತಿನ ಮನೆಯಲ್ಲಿನ ದೀನವಾದ ಆರಂಭಿಕ ಜೀವನದ, ತನ್ನ ಬಾಲ್ಯ ಸ್ನೇಹಿತರ ಸಂಗಡದ ಒಡನಾಟವನ್ನು ನಾನು ಅರಿಯಲು ಬಯಸುತ್ತೇನೆ. ನಾನು ಮತ್ತು ನೀವುಗಳು ಬೆಳದಂತ ಅನುಭವವನ್ನೇ ಆತನು ಹೊಂದಿದ್ದನು ಎಂಬ ಸಂಗತಿಯನ್ನು ಮಾತ್ರ ದೇವರು ಪ್ರಕಟಿಸಿರುವನು.

### ಯೇಸು ಹನ್ನೆರಡು ವರ್ಷದವನಾದಾಗ (ವಚನಗಳು 41-50)

ಆತನು ಹನ್ನೆರಡು ವರ್ಷದವನಾಗಿರುವಾಗ ಎಂದು ಲೂಕನು ಆರಂಭಿಸಿರುವನು. ಒಬ್ಬ ಯೆಹೂದ್ಯ ಬಾಲಕನು ಹನ್ನೆರಡು ಪ್ರಾಯದವನಾದಾಗ: ಅವನು ವ್ಯವಹಾರವನ್ನು, ಕಲಿಯುತ್ತಿದ್ದನು, "ಧರ್ಮ ಶಾಸ್ತ್ರದ ಮಗನೆಂದು"; ಕರೆಯಲ್ಪಡುವದಕ್ಕಾಗಿ ದೇವ ಮಂದಿರದಲ್ಲಿ ಹಿರಿಯರೊಂದಿಗೆ ಕೂತುಕೊಳ್ಳುತ್ತಿದ್ದನು. ಯೇಸು ಹನ್ನೆರಡು ವಯಸ್ಸಿನವನಾದಾಗ, ಆತನ ತಂದೆತಾಯಿಗಳು ಆತನನು, ಪ್ರಮುಖವಾದ ಮೂರು ಹಬ್ಬಗಳಲ್ಲಿ ಪಸ್ಕ ಹಬ್ಬಕ್ಕೆ ಕರೆದೊಯಿದ್ದರು.

ಅವರು ಹಬ್ಬದಿಂದ ಹಿಂದಿರುಗುವಾಗ, ಯೇಸು ತಪ್ಪಿಸಿಕೊಂಡಿದ್ದನು. ಅವರು ಬೇತಿಯಿಂದ, ಯೆರೂಸಲೇಮಿನಲ್ಲಿ ಆತನಿಗಾಗಿ ಹುಡುಕಾಡಿದರು.

> ಮೂರು ದಿನದ ಮೇಲೆ ಆತನನ್ನು ದೇವಾಲಯದಲ್ಲಿ ಕಂಡರು. ಆತನು ಬೋಧಕರ ನಡುವೆ ಕುಳಿತುಕೊಂಡು ಅವರ ಉಪದೇಶವನ್ನು ಕೇಳುತ್ತಾ ಪ್ರಶ್ನೆಮಾಡುತ್ತಾ ಇದ್ದನು. ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರು ಆತನ ಬುದ್ಧಿಗೂ ಉತ್ತರಗಳಿಗೂ ಆಶ್ಚರ್ಯಪಟ್ಟರು (ವಚನಗಳು 46, 47).

ಈ ಚಿತ್ರಣವನ್ನು ತಪ್ಪಾಗಿ ಅರ್ಥೈಸಬೇಡಿ ಆತನು ಶಾಲೆಯಲ್ಲಿ ಬೋಧಿಸಲು ಹೋಗಲಿಲ್ಲ. ಅಲ್ಲಿ ಬೋಧಕರು ಮತ್ತು ವಿದ್ಯಾರ್ಥಿಗಳ ನಡುವೆ ಧಾರ್ಮಿಕ ಪ್ರಶ್ನೆಗಳ ಚರ್ಚೆಯಾಗುತ್ತಿತ್ತು. (ಈ ದಿವಸ ಅದನ್ನು ಚರ್ಚೆಯ ತರಗತಿ ಎನ್ನುತ್ತೇವೆ.) ಇಲ್ಲಿ ಹನ್ನೆರಡು ವರ್ಷದವನ್ನು ಆತ್ಮೀಕ ಸತ್ಯಗಳ ಬಗ್ಗೆ ಆಸಕ್ತಿವುಳ್ಳವನಾಗಿ, ಅಸಹಜವಾದ ಆತ್ಮೀಕ ನಿಯಮಗಳನ್ನು ಹೊಂದಿದ್ದನು.

ಮರಿಯಳು ಆತನನ್ನು ಮಂದಿರದಲ್ಲಿ ಕಂಡ ತಕ್ಷಣ ಆಶ್ಚರ್ಯಪಟ್ಟಳು. "ನಂತರ" ಕಂದಾ ನೀನೂ ನಮಗೆ ಯಾಕೆ ಹೀಗೆ ಮಾಡಿದ್ದೀ? "... ನಿನ್ನ ತಂದೆಯೂ ನಾನೂ ಎಷ್ಟೊ ತಳಮಳಗೊಂಡು ನಿನ್ನನ್ನು ಹುಡುಕಿ ಬಂದೆವಲ್ಲಾ" (ವಚನ 48). ಎಂದು ಹೇಳಲೂ, ಯೇಸು ಅವರಿಗೆ: "ನೀವು ನನ್ನನ್ನು ಹುಡುಕ್ಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?" ಎಂದನು (ವಚನ 49).

ಇವು ಯೇಸುವಿನ ದಾಖಲಾದ ಮೊದಲ ಮಾತುಗಳು, "ನಾನು ನನ್ನ ತಂದೆಯ ಕಾರ್ಯಗಳಲ್ಲಿ ಇರಬೇಕು"[42] ಎಂದು ಮೂಲ ಅರ್ಥವಾಗಿದೆ. "ನನ್ನ ತಂದೆಯ ಕಾರ್ಯಗಳು ಎಂದಿದೆ. ಹ್ಯೂಗೋ ಮೆಕಾರ್ಡ್‌ರವರು, "ನನ್ನ ತಂದೆಯ ವ್ಯವಹಾರಕ"[43] ಎಂದು ಅನುವಾ ದಿಸಿರುವರು. ಅನುವಾದಗಳು ಏನೇ ಇರೀ, ಯೇಸು ಹನ್ನೆರಡು ಪ್ರಾಯದನಾಗಿರುವಾಗಲೀ, ತಂದೆಯ ದೈವೀಕ ಸೇವೆಯ ಪ್ರಜ್ಞೆವುಳ್ಳವನಾಗಿದ್ದನು.

ಇಂಥಹ ಪ್ರಜ್ಞೆ ಇದ್ದಕ್ಕಿದ್ದ ಹಾಗೆ ಬೆಳಕಿನ ಹಾಗೆ ಉಂಟಾಯಿತೇ. ಅಥವಾ ಹೊಸ ದಿನದ ಮುಂಜಾನೆಯಂತೆ ಮಂದಗತಿಯಲ್ಲಿ ಉಂಟಾಯಿತೇ? ಅಥವಾ ಹನ್ನೆರಡರ ಪ್ರಾಯದಲ್ಲೆ ದೇವರ ಸೇವೆಯ ಪೂರ್ಣ ಪ್ರಜ್ಞೆಯನ್ನು ಅಥವಾ ಒಂದು ಭಾಗವನ್ನು ಮಾತ್ರ ಅರಿತಿದ್ದನೇ? ನಿರ್ಧಿಷ್ಟವಾದ ಉತ್ತರವು ನಮ್ಮಲ್ಲಿರದಿದ್ದರೂ, ಹನ್ನೆರಡರ ಪ್ರಾಯದಲ್ಲೇ ಯೇಸು ಪ್ರೌಢಾವಸ್ಥೆಯ ಸ್ವಭಾವವನ್ನು ಹೊಂದಿದ್ದನು.

### ನಂತರದ ಹದಿನೆಂಟು ವರ್ಷಗಳು (ವಚನಗಳು 51, 52)

ಯೇಸು ಹೊಂದಿದ್ದ ದೈವೀಕ ಪ್ರಜ್ಞೆಯ ಬೆಳಕಿನಲ್ಲಿ: "ಬಳಿಕ ಆತನು ಅವರ ಜೊತೆಯಲ್ಲಿ[44] ನಜರೇತಿಗೆ ಬಂದು ಅವರಿಗೆ ಅಧೀನನಾಗಿದ್ದನು ..." (ವಚನ 51). ಯೇಸು ಬಾಲ್ಯಾವಸ್ಥೆಯಲ್ಲಿ ತಾನು ಮಾಡಿದ ಸಂಗತಿ ನ್ಯಾಯವಾದದ್ದೇ ಎಂದು ನಿರೂಪಿಸಬಹುದಾಗಿದ್ದೂ, ತಂದೆತಾಯಿಗಳಿಗೆ ವಿಧೇಯರಾಗುವದು ಆಯ್ಕೆ ಎಂದು ಆತನು ಪರಿಗಣಿಸಿರಲಿಲ್ಲ (ವಿಮೋಚಕಾಂಡ 20:12; ಎಫೆಸ 6:1-3).

ಮುಂದಿನ ಹದಿನೆಂಟು ವರ್ಷಗಳ ಜೀವಿತಕ್ಕೆ ಇಲ್ಲ ತೆರೆ ಎಳೆಯಲಾಗಿದೆ. ಆ ವರ್ಷಗಳ ಕೆಲವು ಅಂಶಗಳನ್ನು ಮಾತ್ರ ಗ್ರಂಥಗಳಲ್ಲಿ ತಿಳಿಸಲಾಗಿದೆ. ಯೇಸು ಒಂದು ದೊಡ್ಡ ಕುಟುಂಬದಲ್ಲಿ ವಾಸಿಸಿದ್ದನು, ಆತನು ಇಬ್ಬರು ಸಹೋದರಿಯರನ್ನೂ ಹಾಗೂ ನಾಲ್ಕು ಸಹೋದರ ರನ್ನು ಹೊಂದಿದ್ದನು (ಮಾರ್ಕ 13:55, 56; ಮಾರ್ಕ 6:3).[45] ಯೋಸೇಫನಿಂದ ಮರಗೆಲಸವನ್ನು ಕಲಿತುಕೊಂಡನು (ಮತ್ತಾಯ 13:55; 6:3). (ಮಾರ್ಕ 14:36) ರಲ್ಲಿ ಯೇಸು "ಅಪ್ಪ" ಅಂದರೆ ಪ್ರೀತಿಯ "ತಂದೆ" ಎಂದಿರುವನು - ಆತನು ಯೋಸೇಫನೊಂದಿಗೆ ಪ್ರಾಮಾಣಿಕವಾದ ಸಂಬಂಧವನ್ನು ಹೊಂದಿದ್ದನು. ಯೋಸೇಫನ ಮರಣದ ನಂತರ,[46] ಹಿರಿಯ ಮಗನಾದ ಯೇಸು ತನ್ನ ಕುಟುಂಬಕ್ಕೆ ಸಹಾಯ ಮಾಡಿರಬಹುದು. ಯೇಸು ದೇವ ಮಂದಿರದ[47] ಶಾಲೆಯಲ್ಲಿ ಗ್ರಂಥಗಳನ್ನು ಅಭ್ಯಾಸ ಮಾಡಿರಬಹುದು.[48] ಆತನು ಕ್ರಮವಾಗಿ ಮಂದಿರಕ್ಕೆ ಹೋಗಿದ್ದನು (ಲೂಕ 4:16). ಯೇಸುವಿನ ಬಾಲ್ಯಾವಸ್ಥೆಯ ಜೀವನವನ್ನು ಈ ರೀತಿಯಾಗಿ ಊಹಿಸಿಕೊಳ್ಳ ಬಹುದು.[49] ಲೂಕ 2:52ರಲ್ಲಿ, "ಯೇಸು ಜ್ಞಾನದಲ್ಲಿಯೂ ದೇಹ ಬಲದಲ್ಲಿಯೂ, ವೃದ್ಧಿಯಾಗುತ್ತಾ ಬಂದನು, ಇದಲ್ಲದೆ ದೇವರ ದೇವರ ಮತ್ತು ಮನುಷ್ಯರ ದಯವು ಆತನ ಮೇಲೆ ಹೆಚ್ಚಾಗುತ್ತಾ ಬಂತು."

ಯೇಸುವಿನ ಬೆಳವಣಿಗೆಯ ಬಗ್ಗೆ ಮುಂತಿಳಿಸಲಾಯಿತು ("ನಮ್ಮ ಹಾಗೆ"), ಆತನು ಮಾನಸಿಕವಾಗಿ ("ಜ್ಞಾನಿ")ಯೂ, ಧೈಹಿಕವಾಗಿಯೂ ("ದೇಹ ಬಲ"), ಸಾಮಾಜಿಕ ವಾಗಿಯೂ ("ಮನುಷ್ಯರ ದಯೆ"), ಆತ್ಮೀಕವಾಗಿಯೂ ("ದೇವ ದಯೆ"), ವೃದ್ಧಿಯಾದನು. ಆತನ ಬೆಳವಣಿಗೆ ಸುಲಭವಾಗಿರಲಿಲ್ಲ (ನಮ್ಮ ಹಾಗೆ): "ವೃದ್ಧಿ" ಎಂಬದು ಗ್ರೀಕ್‌ನ ಜೋಡಿ ಪದವಾಗಿದ್ದು, "ಕತ್ತರಿಸು" ಅಂದರೆ ಮುಂದೆ ಸಾಗು. ಕತ್ತರಿಸುತ್ತಾ ಮುಂದೆ ಸಾಗು ಎಂಬ ಅಕ್ಷರಶಃ ಅರ್ಥ.[50] ಒಬ್ಬನು ಒರಟಾದ ಒಂದು ಕುಂಚದಿಂದ ತನ್ನ ಮಾರ್ಗವನ್ನು ಸರಿಪಡಿಸಿಕೊಳ್ಳುತ್ತಾ ಯಶಸ್ಸಿನ ಕಡೆ ಸಾಗುವಂತೆ ಆತನ ಮುಂದಿನಸೇವೆಯ ಆರಂಭಕ್ಕಾಗಿ ಯೇಸು ಸಿದ್ಧನಾದನು ಎಂದು ಮುಂದಿನ ಪಾಠದಲ್ಲಿ ಗಮನಿಸುತ್ತೇವೆ.

## ಮುಕ್ತಾಯ

ಒಂದು ಮಗು ನಮಗಾಗಿ ಜನಿಸುವದು ಎಂದು ಯೆಶಾಯನು ಪ್ರವಾದಿಸಿದನು (ಯೆಶಾಯ 9:6). ಒಂದು ಮಗಜನಿಸಿ, ಸಂರಕ್ಷಿಸಲ್ಪಟ್ಟು, ಮತ್ತು ದೇವರಿಂದ ಸಿದ್ಧಗೊಂಡು, ಪ್ರವಾದನೆಯು ನೆರವೇರಿದ್ದನ್ನು ಗಮನಿಸಿದ್ದೇವೆ. ಪ್ರತಿ ಹಂತದಲ್ಲೂ ದೇವರು ಎಲ್ಲವನ್ನು ಹತೋಟಿಯಲ್ಲಿಟ್ಟಿದ್ದನು.

ಯೇಸುವಿನ ಮೂವತ್ತು ವರ್ಷಗಳ ಜೀವನವನ್ನು ಕ್ಲುಪ್ತವಾಗಿ ಅಧ್ಯಯನ ಮಾಡಿದೆವು. ಯೇಸು ಬಾಲ್ಯದಲ್ಲೆ ಸೇವೆಯನ್ನು ಆರಂಭಮಾಡದ, ಮೂವತ್ತು ವರ್ಷಗಳ ಸಮಯವನ್ನು ಏಕೆ ತೆಗೆದುಕೊಂಡನು ಪ್ರಶ್ನೆ ಇರಬಹುದು. B. S. ಡೀನ್ ರವರ ಪ್ರಕಾರ, "ಪ್ರಪಂಚವು ಒಂದು ಪೂರ್ಣವಾದ ಸದ್ಗುಣವನ್ನು ಬಯಸುತ್ತದೆ. ನಜರೇತಿನಲ್ಲಿ ಸಿದ್ಧಗೊಂಡು ಈ ಗುಣಲಕ್ಷಣ ವ್ಯರ್ಥವಾಗಲಿಲ್ಲ."[51] ಈ ಸಮಯದಲ್ಲಿ, ಯೇಸು ತನ್ನ ತಂದೆಯ ವ್ಯವಹಾರದಲ್ಲಿದ್ದು. ನಂತರ ಎಡೆಬಿಡದೆ ಸೇವೆ ಮಾಡಿದನು. ಸಿದ್ದತೆ ಪ್ರಾಮುಖ್ಯವಾದದ್ದು, ಅಸಡ್ಡೆ ಮಾಡಬೇಡಿರಿ.

---

ಟಿಪ್ಪಣಿಗಳು

[1]ದೇವದೂತನ ಸಂದೇಶನವನ್ನು ಅವನೊಂದಿಗೆ ತಿಳಿಸಿರುವ ಮಾಹಿತಿ ಇರುವದಿಲ್ಲ. ಒಂದು ವೇಳೆ ಆಕೆ ಹೇಳಿದ್ದರೂ ಆತನು ನಂಬುವುದಕ್ಕೆ ಕಷ್ಟವಾಗಿರುವುದು. [2]ನನ್ನ ಹತ್ತಿರ ಇರುವ NASB "ಬಿಟ್ಟು ಬಿಡಬೇಕೆಂದು": ಆಕೆಯನ್ನು "ಸ್ತ್ರೀಪರಿತ್ಯಾಗ ಮಾಡ ಬೇಕೆಂದು" ಇದೆ. [3]"ಸ್ತ್ರೀಪರಿತ್ಯಾಗ" ಪತ್ರವನ್ನು ಇಬ್ಬರು ಮೂವರ ಸಾಕ್ಷಿ ಸಮಕ್ಷೆಯಲ್ಲಿ ಕೊಡಬೇಕು. ಪುರುಷನು ಬಯಸಿದರೆ, ಹೆಂಡತಿಗೆ

ನಾಚಿಕೆಯಾಗುವಂತೆ ಬಹಿರಂಗವನ್ನು ಕೊಡುವುಂಟು. ಯೋಸೇಫನು ಇದನ್ನು ಬಯಸಲಿಲ್ಲ: "... ಆಕೆಯನ್ನು ಬೈಲಿಗೆ ತರುವದಕ್ಕೆ ಮನಸಿಸಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು" (ಮತ್ತಾಯ 1:19). [4]ತ್ಯಾಗ ಪತ್ರ ನೀಡಿದ ತಕ್ಷಣ, ನಿರಂತರವಾಗಿ ಮರಿಯಳನ್ನು ಹೊಂದಲಾರನು (ಧರ್ಮೋಪದೇಶಕಾಂಡ 24:2-4). [5]ಯೇಸು ಜನ್ಮಿಸಿದಾಗ ಮರಿಯಳ ಕನ್ಯಳೆಂಬ ವಾಸ್ತವವನ್ನು ತಿಳಿಸುವ ಮತ್ತೊಂದು ವಾಕ್ಯವು ಇದಾಗಿದೆ. ಕನ್ಯಳ ಜನ್ಮದ ಬಗ್ಗೆ ಕೊಟ್ಟಿರುವ ಸೂಚನೆಯನ್ನು ಈ ಪುಸ್ತಕದಲ್ಲಿ ಬರೆಯಲಾಗಿದೆ. [6]ಮರಿಯಳು "ಮಗುವಿಗೆ ಜನ್ಮ ಕೊಟ್ಟನಂತರ" ಎಂಬುದು ಸಾಮಾನ್ಯವಾದ ವ್ಯಾಖ್ಯಾನ ವಾದದ್ದು ಅವರಿಬ್ಬರು ಸಹಜವಾದ ಕೌಟುಂಬಿಕ ಜೀವನವನ್ನು ನಡೆಸಿದ್ದರು ಎಂಬುದನ್ನು ತಿಳಿಸುತ್ತದೆ. [7]"ಹಳೆ ಒಡಂಬಡಿಕೆಯ ದೇವರ ವಾಕ್ಯಗಳು ಹೇಗೆ ನೆರವೇರಿದವು" ಎಂಬ ಪಾಠವನ್ನು ನೋಡಿ. [8]The KJV has "Emmanuel," another way of spelling "Immanuel." [9]ನರವತಾರವನ್ನು ದೃಢಪಡಿಸುತ್ತದೆ. ಇದರ ಬಗ್ಗೆ "ಕ್ರಿಸ್ತನು ಬರಲಿದ್ದಾನೆ" ಎಂಬ ಪಾಠವನ್ನು ನೋಡಿ. [10]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 26.

[11]KJVಯಲ್ಲಿ "ಟ್ಯಾಕ್ಸ್‌ಡ್" ಎಂದು ಇದೆ. ಗ್ರೀಕ್‌ನಲ್ಲಿ ವಾಕ್ಯಭಾಗವು ನಮೂದಿಸಲಾಗಿದೆ ಎಂಬ ಅರ್ಥಕೊಡುತ್ತದೆ. NKJVಯಲ್ಲಿ "ದಾಖಲಾಗಿದೆ" ಎಂದು ಇದೆ. [12]ಎರಡನೇ ವಚನದ ಬಗ್ಗೆ ಮತ್ತು ಪ್ರಜಾ ಗಣತಿಯ ಬಗ್ಗೆ "ಕ್ರಿಸ್ತನು ಯಾವಗ ಜನ್ಮಿಸಿದನು?" ಎಂಬ ಪಾಠವನ್ನು ನೋಡಿ. [13]ಬೆತ್ಲೆಹೇಮ ಎಂಬುದು ಹಳೇ ಒಡಂಬಡಿಕೆಯಲ್ಲಿ ಅನೇಕಬಾರಿ ಹೇಳಲ್ಪಟ್ಟಿದೆ (ಆದಿಕಾಂಡ 48:7; ರೂತ 1:22), ಆದರೆ ಇದು ಮುಖ್ಯವಾಗಿ "ದಾವೀದನ ಪಟ್ಟಣಕ್ಕೆ" ಹೆಸರುವಾಸಿಯಾಗಿತ್ತು (1 ಸಮುವೇಲ 16:1; 17:12; 20:6). [14]ರೋಮಾ ಸಾಮ್ರಾಜ್ಯ ಆಜ್ಞಾಪಿಸದಿದ್ದರೆ ಯೋಸೇಫನು ಬೆತ್ಲೆಹೇಮಿಗೆ ಹೋಗಿರಲಾರನು ಎಂಬ ಲೇಖನವು ಸೂಚಿಸುತ್ತದೆ. ಮತ್ತು ಯೇಸು ಬೆತ್ಲೆಹೇಮಿನಲ್ಲೇ ಹುಟ್ಟಬೇಕು ಎಂದು ದೇವರು ಅವರಿಗೆ ತಿಳಿಸಿರಲಿಲ್ಲ. ಮರಿಯಳಿಗೆ ಈ ಪ್ರಯಾಣವನ್ನು ಮಾಡುವದರಲ್ಲಿ ಬೇರೆ ಉದ್ದೇಶವಿರಬೇಕು. [15]ಯೋಸೇಫನು ಈಗಾಗಲೇ ಮರಿಯಳನ್ನು "ಪತ್ನಿಯಾಗಿ ಹೊಂದಿದ್ದನು" ಮತ್ತಾಯನ ದಾಖಲೆಗಳು ಹೇಳುತ್ತವೆ (ಮತ್ತಾಯ 1:24) - ಮತ್ತೊಂದು ಮಾತಲ್ಲಿ ಹೇಳುವುದಾದರೆ ಅವರ ಮದುವೆ ಮಾಡಿಕೊಂಡಿದ್ದರು. "ಅಧಿಕೃತವಾಗಿ" ವಿವಾಹವು ನಡೆಸುವವರಿಗೆ ಅದು ನಿಜವಾಗಿ ವಿವಾಹವಲ್ಲ. ಆದ್ದರಿಂದ ಲೂಕನ ದಾಖಲುಗಳಲ್ಲಿ ಯೋಸೇಫನು ಮತ್ತು ಮರಿಯಳು ಇನ್ನ "ನಿಶ್ಚಿತಾರ್ಥ" ಕಾದಲ್ಲಿದ್ದವು (ಲೂಕ 2:5). [16]ಯೇಸು ನೆಲಮಾಳಿಗೆಯಲ್ಲಿ ಹುಟ್ಟಿದನು ಎಂದು ಬೆತ್ಲೆಹೇಮಿನ ಪ್ರವಾಸದಲ್ಲಿ ತಿಳಿಸುತ್ತಾರೆ. ಬಾಲ ಯೇಸನು ಗೊದಳಿಯಲ್ಲಿ ಇಟ್ಟರೆಂದು ಅನೇಕರು ಹೇಳಿಕೊಳ್ಳುತ್ತಾರೆ. ಈ ತೊಟ್ಟಿ ಪಟ್ಟಣದಲ್ಲಿ ಎಲ್ಲಿಯಾದರು ಇರಬಹುದು. [17]ಮರಣ ಪುನರುತ್ಥಾನಕ್ಕಿಂತಲೂ, ಆತನ ಜನನ ಅತಿ ಆಕರ್ಷಕವಾದ್ದದೆಂದು ನಾನು ಹೇಳುತ್ತಿಲ್ಲ. "ವಿಶೇಷವಾದುದ್ದೆಂದು ನಾನು ಹೇಳುವಾಗ ದೇವರು ಶರೀರದ ಆದಿಯಾಗಿ ನಮ್ಮ ಪಾಪಗಳಿಗೆ ಪರಿಹಾರವನ್ನು ನೀಡಲು ಕ್ರಯವನ್ನು ತಿಳಿಸಿದನು." [18]ಚೊಚ್ಚಲು ಎಂಬುದನ್ನು ಅನೇಕ ವಿಧಾನದಲ್ಲಿ ಉಪಯೋಗಿಸಬಹುದು (ಇಬ್ರಿಯ 1:6); ಆದರೆ ಲೂಕ 2ರಲ್ಲಿ ಸಂದರ್ಭದಲ್ಲಿ ಸಹಜವಾದ ಅರ್ಥವು "ಚೊಚ್ಚಲು" ಎಂಬ 7ನೇ ವಚನದಲ್ಲಿರುವ ಪದವು ಮರಿಯಳಿಗೆ ಮತ್ತಿತ್ತರ ಮಕ್ಕಳಿದ್ದರೆಂದು ಸೂಚಿಸುತ್ತದೆ. [19]ಪರಲೋಕದ ಸಮೂಹದ ಮಾತುಗಳನ್ನು ಹೆಚ್ಚಾಗಿ ತಿಳಿದು ಮತ್ತು ಪ್ರೀತಿಸಲಪಟ್ಟಿವೆ (ವಚನ 14). "ಸಮಾಧಾನವೆಂದು" ಹೇಳಲ್ಪಟ್ಟಿದ್ದು ಮನುಷ್ಯರೆಲ್ಲರಿಗಲ್ಲ (KJV ಸೂಚಿಸಿದಂತೆದೇ), "ದೇವರಿಂದ ಪ್ರೀತಿಸಲ್ಪಟ್ಟವರಿಗೆ" ಎಂದು NASBಯಲ್ಲಿದೆ. [20]ವಚನ 19ನ್ನು ಗಮನಿಸು: "ಎಲ್ಲಾ ಮಾತುಗಳನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡ ಯೋಚಿಸುತ್ತಿದ್ದಳು." ಈ ವಚನವು ಮತ್ತು 2:51ರೊಂದಿನ ಅಂತ್ಯಭಾಗದೊಂದಿಗೆ ಮರಿಯಳು ತನ್ನ ಯೋಚನೆಗಳನ್ನು ಲೂಕನೊಂದಿಗೆ ಹಂಚಿಕೊಂಡಿರಬೇಕೆಂದು ಹೇಳುತ್ತಾರೆ.

[21]ಯೇಸುವಿನ ಮರಣ, ಹಳೇ ಒಡಂಬಡಿಕೆ ಅಂತ್ಯವನ್ನು ಸೂಚಿಸುತ್ತದೆ (ಕೊಲಸ್ಸೆ 2:14), ಹಾಗೂ ಹೊಸ ಒಡಂಬಡಿಕೆ ಆರಂಭ (ಇಬ್ರಿಯ 9:16, 17). [22]ಬಡವರು ಸಮರ್ಪಿಸುವ ಕಾಣಿಕೆಯನ್ನು ಅವರು ನೀಡಿದರು. [23]ಪ್ರವಾದಿಯು ದೇವರ ಮಾತಿನ ಪ್ರತಿನಿಧಿ. ಪ್ರವಾದಿನಿ, ಪ್ರವಾದಿನಿಗಳು ದೈವ ಪ್ರೇರಿತ ಕಾಲದಲ್ಲಿ ಅಸಹಜವಾಗಿದ್ದರು. ಹಳೇ ಒಡಂಬಡಿಕೆಯಲ್ಲಿ ದೆಬೋರ್ಳು ಪ್ರವಾದಿನಿಯಾಗಿದ್ದಳು (ನ್ಯಾಯಸ್ಥಾಪಕರು 4:4). [24]ಲೂಕ 2:39 "ಅವರು ಗಲಿಲಾಯದ ನಜರೋತೆಂಬ ತಮ್ಮ ಹಳ್ಳಿಗೆ ಹೋದರು." ಅವರು ಬೆತ್ಲೆಹೇಮಿಗೆ ಹಿಂದಿರುಗಿ ಬಂದ ಮೇಲೆ ಯೆಸೋಫೆನ ವಸ್ತುಗಳನ್ನು ತೆಗೆದುಕೊಂಡು ಬರಲು ಮತ್ತೆ ನಜರೇತಿಗೆ ಹೊದದ್ದುನ್ನು ಸೂಚಿಸುತ್ತದೆ ಅಂತಹ ಪ್ರಯಾಣವು ಮಾಡಿರಬಹುದು ಆದರೆ 2:39ರಲ್ಲಿರು ಲೂಕನ ಪದಗಳು ಅವರು ನಜರೇತಿನಲ್ಲಿ ಮನೆಮಾಡಲು ಹೋಗಿರಬಹುದೆಂದು ತಿಳಿಸುತ್ತವೆ. ಈ ಸ್ಥಳದಲ್ಲಿ ಲೂಕನು ಈ ವಿಷಯವನ್ನು ಸಂಕ್ಷಿಪ್ತವಾಗಿ ಬರೆದಿರಬಹುದು, ಜೋಯಿಸರ ಬಗ್ಗೆ ಮತ್ತು ಅವರ ಐಗುಪ್ತ ಪ್ರಯಾಣದ ಬಗ್ಗೆ ಹೇಳಲಿಲ್ಲ. ಲೂಕನು ಸೌಲಿನ

ಪರಿವರ್ತನೆಯ ಬಗ್ಗೆ ದಾಖಲಿಸುವಾಗ (ಅಪೊಸ್ತಲರ ಕೃತ್ಯಗಳು 9:19-26), ಸೌಲನು ಅರೇಬಿಯದಲ್ಲಿ ಸ್ವಲ್ಪ ಸಮಯವನ್ನು ಕಳೆದನು ಎಂಬುದರ ಬಗ್ಗೆ ಹೇಳಿಕೊಳ್ಳಲಿಲ್ಲ (ಗಲಾತ್ಯ 1:17). ಶಾಸ್ತ್ರಗಳ ಬರಹಗಾರರ ಉದ್ದೇಶವು ಪ್ರತಿಯೊಂದು ವಿವರವನ್ನು ಕೊಡುವುದ್ದಾಗಿದ್ದಿಲ್ಲ. [25]ಇದು ತಮ್ಮ ವಸ್ತುಗಳನ್ನು ಹಿಂದೆ ತೆಗೆದುಕೊಳ್ಳಲು ಮಾಡಿದ ನಜರೇತಿನ ಪ್ರಯಾಣವಾಗಿರಬೇಕು ಆದರೆ ಲೂಕನ 2:39 ಮಾತಿನ ಪ್ರಕಾರ ನಜರೇತಿನಲ್ಲಿ ನಿವಾಸ ಮಾಡಲು ಹೋಗಿರಬೇಕು. ಬಹುಶಃ ಲೂಕನು ಈ ಕಥೆಯನ್ನು ಸಂಕ್ಷಿಪ್ತವಾಗಿ ಹೇಳುವಾಗ ಜ್ಞಾನರ ಸಂದರ್ಶನವನ್ನು ಮತ್ತು ಐಗುಪ್ತಗೆ ಪ್ರಯಾಣವನ್ನು ದಾಖಲೆ ಮಾಡದೆ ಇದ್ದಹಾಗೆಯೇ ಈ ವಿಷಯವನ್ನು ಕೂಡ ದಾಖಲಿಸಲಿಲ್ಲ, ಆದರೆ ಲೂಕನು ಪೌಲನ ಮನಸಾಂತರದ ಶೇಷ ಭಾಗವನ್ನು ಕೊಡುವಾಗ (ಅಪೊಸ್ತಲರ ಕೃತ್ಯಗಳು 9:19-26), ಪೌಲನು ಅರೇಬಿಯಾದಲ್ಲಿ ಸಮಯವನ್ನು ಕಳೆದದ್ದ ಬಗ್ಗೆ ಬಿಟ್ಟುಬಿಟ್ಟನು (ಗಲಾತ್ಯ 1:17). ಪ್ರತಿಯೊಂದು ವಿವರವನ್ನು ನೀಡುವುದು ಬರಹಗಾರರ ಉದ್ದೇಶವಲ್ಲ. [26]"ರಕ್ಷಕನನ್ನು ಹುಡುಕಿದರು" ಎಂಬ ಪಾಠವನ್ನು ಜೋಯಿಸರ ಬಗ್ಗೆ ಹೆಚ್ಚಾದ ವಿವರಕ್ಕೆ ನೋಡಿರಿ. [27]ಜೋಯಿಸರು ಸತ್ಯಶೋಧನೆ ಮಾಡಿದರು. ಹಲವು ಜೋಯಿಸರು ಸತ್ಯ ವಿರೋಧಿಗಳಾಗಿದ್ದರು. (ಅಪೊಸ್ತಲರ ಕೃತ್ಯಗಳು 8:9; 13:6, 8ರಲ್ಲಿ ಅದೇ ಗ್ರೀಕ್ ಪದವನ್ನು ಕಾಣಬಹುದು.) [28]"ಜೋಯಿಸರು, ಜೋತಿಷ್ಯರು, ಔಷದೋಪಚಾರ ಮಾಡುವವರು, ಖಗೋಳಜ್ಞರು ಆಗಿದ್ದರು" ಎಂದು NASBಯಲ್ಲಿ ಇದೆ. [29]"ನಾವು ಮೂವರು" ಜೋಯಿಸರು ಎಂಬ ಪ್ರಸಿದ್ಧ ಸಂಗೀತವಿದೆ. ಅರಸರು ಎಂದರೆ ತಪ್ಪಾಗುತ್ತದೆ ಮೆಸ್ಸಿಯನ ಕುರಿತ ಪ್ರವಾದನೆಗಳಲ್ಲಿ ಅರಸುಗಳು ಆತನನ್ನು ಪೂಜಿಸುವರು ಎಂದು ಹೇಳಲಾಗಿದೆ (ಕೀರ್ತನೆ 72:10, 11; ಯೆಶಾಯ 49:7; 60:3). ಆದ್ದರಿಂದ ಜೋಯಿಸರು ಅರಸರೆಂದು ಭಾವಿಸಿದರು. [30]ಜೋಯಿಸರು ಆತನು ಅರಸನಾಗಿ ಹುಟ್ಟಿದ್ದರೂ, ನಂತರದಲ್ಲಿ ಅವನು ಅರಸನಾಗಲಿಲ್ಲ ಆದರೂ ಹೆರೋದನು ಭಯಪಟ್ಟನು ಎಸ್ತೆರು 1:13; ದಾನಿಯೇಲ 2:12ರಲ್ಲಿನ "ವಿದ್ವಾಂಸರು" ಎಂಬುದು ಮತ್ತಾಯ 2ರಲ್ಲಿನ ಜೋಯಿಸರು ಎಂಬುದು ಒಂದೇ ವರ್ಗಕ್ಕೆ ಸಂಬಂಧಿಸಿದ್ದು.

[31]ಯೇಸು ಅನಂತರ ಅರಸನಾಗಲಿಲ್ಲ; ಅರಸನಾಗಿ ಹುಟ್ಟಿದನು. ಈ ವಾಕ್ಸರಣಿಯು ಹೆರೋದನನ್ನು ಗಾಬರಿಯಾಗುವಂತೆ ಮಾಡಿತು. ಹೆರೋದನು ಅರಸನಾಗಿ ಹುಟ್ಟಲಿಲ್ಲ. ರೋಮಾ ಅಧಿಕಾರಿಗಳು ಆತನನ್ನು ಅರಸನನ್ನಾಗಿ ನೇಮಿಸಿದರು. ಪಾಲೇಸ್ತಿನವನ್ನು ಪಾಲಿಸಲು ದೇವರ ವಾಕ್ಯದ ಅನುಮತಿಯಿಲ್ಲ. ಏಕೆಂದರೆ ಆತನು ದಾವೀದನ ಸಂತತಿಯವನಲ್ಲ. "ಯೆಹೂದ್ಯರ ಅರಸನಾಗಿ ಹುಟ್ಟಿದವನು" ಹೆರೋದನ ಆಳ್ವಿಕೆಗೆ ದಕ್ಕೆ ಉಂಟುಮಾಡುವವನೆಂದು ತಿಳಿದಿದ್ದನು. [32]ಈ ಪ್ರಯಾಣವು ಹಳೇ ಒಡಂಬಡಿಕೆಯ ವಾಕ್ಯಗಳನ್ನು ನೆರವೇರಿಸಿದನು ಎಂದು ಮತ್ತಾಯನು ಒತ್ತಿ ಹೇಳಿದನು (2:15). ಹಳೇ ಒಡಂಬಡಿಕೆಯ ವಾಕ್ಯಗಳು ಹೇಗೆ ನೆರವೇರಿದವು ಎಂಬುದರ ಬಗ್ಗೆ "ಹಳೆ ಒಡಂಬಡಿಕೆಯ ದೇವರ ವಾಕ್ಯಗಳು ಹೇಗೆ ನೆರವೇರಿದವು" ಎಂಬ ಪಾಠವನ್ನು ನೋಡಿ. [33]ಅಲೆಕ್ಸಾಂಡ್ರಿಯ ಮತ್ತು ಯೆಹೂದ್ಯರ ಬಗ್ಗೆ "ಕ್ರಿಸ್ತನು ಅವತರಿಸಿದ ಲೋಕ" ಎಂಬ ಪಾಠವನ್ನು ನೋಡಿ. ಅಲೆಕ್ಸಾಂಡ್ರಿಯದ ಜನಸಂಖ್ಯೆಯ ಒಂದರಿಂದ, ಎರಡುವರೆ ಪಟ್ಟು ಯೆಹೂದ್ಯರು ನೆಲಸಿದ್ದರು. [34]ಹನ್ನೆಡು ತಿಂಗಳ ಮಕ್ಕಳಿಗೆ ಯೆಹೂದ್ಯರು ಎರಡು ವರ್ಷದ ಮಕ್ಕಳು ಎನ್ನುತ್ತಿದ್ದರು. ಇದೇ ತರಹದ ಗಣಾಂಕವನ್ನು ಅನೇಕ ದೇಶಗಳಲ್ಲಿ ಬಳಸಲಾಗಿದೆ. (ಹೊಸದಾಗಿ ಹುಟ್ಟಿದವರು ಜೀವನದ ಮೊದಲನೇ ವರ್ಷದಲ್ಲಿ ಇರುವರು; ಆತನು ಮೊದಲನೇ ಹುಟ್ಟು ಹಬ್ಬವನ್ನು ಆಚರಿಸುವಾಗ ಎರಡನೇ ವರ್ಷದೊಳಗೆ ಪ್ರವೇಶಿಸುವನು; ಈ ತರಹದ್ದು.) ವಚನ 16ರಲ್ಲಿ ನಕ್ಷತ್ರವು 12 ತಿಂಗಳ ಮೊದಲ ಬಾರಿ ಕಾಣಿಸಿಕೊಂಡಿತು. ಅಥವಾ ಮುಂಚಿತವಾಗಿಯೇ. ಆರು ತಿಂಗಳು ಮುಂಚಿತವಾಗಿಯೇ ನಕ್ಷತ್ರವು ಕಾಣಿಸಿಕೊಂಡಿದೆಂದು ಕೆಲವರು ನಂಬುತ್ತಾರೆ ಮತ್ತು ಹೆರೋದನು "ಸುರಕ್ಷಿತವಾಗಿರಲು" ಈ ಸಂಖ್ಯೆಯನ್ನು ಎರಡು ಪಾಲು ಹೆಚ್ಚು ಮಾಡಿದನು. ಪಾಲೇಸ್ತೀನದಲ್ಲಿ ಜೊಯಿಸರು ಬಂದಾಗ ಯೇಸು ಬಹುಶಃ ಆರು ತಿಂಗಳಿಂದ 12 ತಿಂಗಳ ವಯಸ್ಕನಾಗಿರಬಹುದು ಬರಹಗಾರರು ಯಾರೋ ಗೊತ್ತಿಲ್ಲ. [35]Author unknown. Quoted by B. S. Dean, "An Outline of New Testament History," *Truth for Today* (March 1992): 10. [36]ಮಕ್ಕಳನ್ನು ಹತಿಸಿದ ಪ್ರವಾದನೆಯ ನೆರವೇರಿದ ಬಗ್ಗೆ "ಕ್ರಿಸ್ತನು ಅವತರಿಸಿದ ಲೋಕ" ಎಂಬ ಪಾಠದಲ್ಲಿ ನೋಡಿ. [37]ಮಕ್ಕಳ ಮರಣ, ಕುಟುಂಬಕ್ಕೆ ವೇದನೆಯಾದರೂ, ಅವರು ಪರಲೋಕಕ್ಕೆ ಹೋಗುತ್ತಾರೆ (ಮತ್ತಾಯ 19:14). [38]ದೇವರ ಉದ್ದೇಶವನ್ನು ನಾಶಪಡಿಸುವುದೇ ಸೈತಾನನ ಒಂದು ಉದ್ದೇಶ. [39]ಅರ್ಕೆಲೆಸ್‌ನ ಬಗ್ಗೆ ಹೆಚ್ಚಾದ ವಿವರಗಳನ್ನು "ಕ್ರೈಸ್ತನು ಅವತರಿಸಿದ ಲೋಕ" ಎಂಬ ಪಾಠವನ್ನು ನೋಡಿ. [40]ಮತ್ತಾಯ 2:23ರಲ್ಲಿನ ವಾಕ್ಯದ ನೆರವೇರಿಕೆಯನ್ನು "ಹಳೆ ಒಡಂಬಡಿಕೆಯ ದೇವರ ವಾಕ್ಯಗಳು ಹೇಗೆ ನೆರವೇರಿದವು" ಎಂಬ ಪಾಠವನ್ನು ನೋಡಿ. ನಜರೇನ್ ಎಂಬ ಪದವನ್ನು ನಜರೇತ್ ಎಂಬ ಪದವು ಹಲವರಲ್ಲಿ ಗೊಂದಲ ಉಂಟುಮಾಡುತ್ತದೆ. "ನಜರೇನ್" ಎಂದರೆ ನಜರೇತಿನಲ್ಲಿ ಯೇಸು ಬೆಳೆದನು ಎಂದರ್ಥ. ನಜರೇತ್ ಎಂಬುದು ನಾಜೀರ ಎಂಬುದು ನಾಜೀರ

ಎಂಬ ಪ್ರಮಾಣವನ್ನು ತೆಗೆದುಕೊಳ್ಳುವುದ್ನು ಸೂಚಿಸುತ್ತದೆ (ನೋಡಿ ಅರಣ್ಯಕಾಂಡ 6:1-8). ಸ್ನಾನಿಕನಾದ ಯೋಹಾನನ ನಾಜೀರ ಮಾಡಿಕೊಂಡನು (ಲೂಕ 1:15ನ್ನು ಅರಣ್ಯಕಾಂಡ 6:3, 4ಕ್ಕೆ ಹೋಲಿಸಿ) ಆದರೆ ಯೇಸು ನಾಜೀರರಲ್ಲ (ಮತ್ತಾಯ 11:18, 19).

[41]"ಪ್ರಕೃತಿಯು ಶೂನ್ಯವಾಗಿ ನಿಂತಿಲ್ಲ" ಎಂದು ಹೇಳಲಾಗಿದೆ. ಹಾಗೇಯೇ ಮನುಷ್ಯನು ಅರಿಯದೆ ಇರುವದು ಅಸಾಧ್ಯ. ತತ್ಪಲಿತವಾಗಿ ದೈವಪ್ರೇರೇಪಿತವಲ್ಲದ ಮನುಷ್ಯರು ಯೇಸುವಿನ ಮುಂದಿನ ಜೀವಿತದ ಬಗ್ಗೆ ನಾನಾ ತರಹದ ಕಥೆಗಳನ್ನು ಬಳಸಿದ್ದಾರೆ - ಹಲವು ಕ್ರೂರವಾದವು ಮತ್ತು ದೇವದೂಷಣೆಯಂತಹವು. ದೈವಪ್ರೇರೇಪಿತವಲ್ಲದ "ಅಪೊಕ್ರಿಪಲ್" ಪುಸ್ತಕಗಳು ದೈವ ಪೇಲಿತ ಸುವಾರ್ತೆಗಳಿಗಿಂತ ಭಿನ್ನವಾಗಿವೆ. [42]ಅಕ್ಷರಾರ್ಥವಾಗಿ "ನನ್ನ ತಂದೆ ಸಂಗತಿಗಳಲ್ಲಿ" ಇಲ್ಲವೆ "ವಿಷಯಗಳಲ್ಲಿ" ಎಂದು NASB ಸೂಚನೆಯಲ್ಲಿ ಇದೆ. [43]Hugo McCord, *McCord's New Testament Translation of the Everlasting Gospel* (Henderson, Tenn.: Freed-Hardeman University, 1988). [44]ಜನರು ಯರೂಸಲೇಮಿಗೆ ಹೋಗುವಾಗ "ಯೆರೂಸಲೇಮಿನವರೆಗೆ ಹೋದರು" ಎಂದು ಹೇಳ ಲಾಗಿದೆ. ಅವರು ಹಿಂದಿರುಗಿ ಗೃಹಕ್ಕೆ ಬರುವಾಗ "ಇಳಿದು ಹೋದರು" ಎಂದು ಹೇಳಲಾಗಿದೆ. ಯೆರೂಸಲೇಮು ಎತ್ತರದಲ್ಲಿ ಇರುವ ದೇಶ ಆದ್ದರಿಂದ ಹೀಗೆ ಹೇಳಲಾಗಿದೆ. ಇದನ್ನು ದಾವೀದನು ತನ್ನ ರಾಜಧಾನಿ ನಗರವನ್ನಾಗಿ ಮಾಡಿಕೊಂಡಿದ್ದು ಇದು ಒಂದು ಕಾರಣ ವಾಗಿರಬಹದು. [45]ಆತನ ಆರಂಭದ ಸೇವೆಯಲ್ಲಿ ತನ್ನ ಸಹೋದರರು ಆತನನ್ನು ಅಂಗಿಕರಿಸಲಿಲ್ಲ (ಯೋಹಾನ 7:5). ಅವರು ಆತನ ದೈವಿಕವಾದ ಮೂಲದಾರವನ್ನು ವಿಶ್ವಾಸ ಇಡಲಿಲ್ಲ. [46]ಈ ಅಂಶದ ಮೇಲ್ಲಿರುವ ಹದಿನಾಲ್ಕನೇ ಪುಟದಲ್ಲಿ ಸೂಚನೆಗಳನ್ನು ಪುನಃ ಆಲೋಚಿಸಿ. [47]ಯೇಸುವು ಹಳೆಯ ಒಡಂಬಡಿಕೆಯಲ್ಲಿನ ಪುಸ್ತಕದಿಂದ ಹೆಚ್ಚಿನ ಭಾಗವನ್ನು ಎತ್ತಿ ತೋಲಿಸಿದ್ದಾನೆ. ನೀವು ನಾನು ಕಲಿತುಕೊಳ್ಳುವ ವಿಧಾನದಲ್ಲಿಯೇ, ಆತನು ಲೇಖನ ಭಾಗಗಳನ್ನು ಕಲಿತು ಕೊಂಡಿರಬಹುದು - ಓದುವುದಕ್ಕೆ ಮಾಡುವುದಕ್ಕೆ ದ್ಯಾನಿಸುವುದು ನಡೆದಿರಬಹುದು. [48]ಆತನು ರಬ್ಬಿಗಳ ಪಾಠ ಶಾಲೆಗಳಲ್ಲಿ ಪಠಿಸಲಿಲ್ಲ, ಆದುದರಿಂದ ಆತನ ಪಾಂಡಿತ್ಯವನ್ನು ಅವರು ಪ್ರಶಿಸಿದರು (ಯೋಹಾನ 7:15). "ಆತನು ಕಾಲೇಜು ಪದವಿಯನ್ನು ಹೊಂದಿದವನಲ್ಲ" ಎಂಬುದು ಇಂದಿನ ಭಾಷೆ. [49]ಕರ್ತನ ಉಪಮಾನದಲ್ಲಿ ಆತನ ಪ್ರಜೆಗಳನ್ನು ಪ್ರಕೃತಿಯನ್ನು ಪರೀಶೀಲಿಸಿದನು ಎಂದು ಕಾಣಿಸುತ್ತದೆ. ಬೆಳಿಗ್ಗೆ ಎದ್ದು ಪ್ರಾರ್ಥಿಸುವ ಅಭ್ಯಾಸ ಕರ್ತನು ಮಾಡಿಕೊಂಡನು (ಮಾರ್ಕ 1:35). ಎಲ್ಲದಕ್ಕಿಂತ ಅತಿ ಪ್ರಮುಖ್ಯವಾದದ್ದು ಆತನು ದೇವರ ಪ್ರತಿ ಆಜ್ಞೆಗೆ ಒಳಗಾಗಿದನು (ಯೋಹಾನ 4:34 ನೋಡಿ). ಹಳೇ ಒಡಂಬಡಿಕೆಯನ್ನು ಸಂಪೂರ್ಣವಾಗಿ ನೇರವೇಲಿಸಿದವನು ಆತನು ಮಾತ್ರವೇ. [50]W. E. Vine, *The Expanded Vine's Expository Dictionary of New Testament Words,* ed. John R. Kohlenberger III with James A. Swanson (Minneapolis: Bethany House Publishers, 1984), 25.

[51]B. S. Dean, "The Period of Preparation," in "An Outline of New Testament History," *Truth for Today* (March 1992): 12.